**ಒ ಎಸ್ ನಂ. 95/2024**
**ಪಿ ಡಬ್ಲ್ಯೂ 01**

**ದಿಃ 23-06-2025 ರಂದು ಸಾಕ್ಷಿಯನ್ನು ಕರೆಸಿ ಪ್ರತಿಜ್ಞೆ ಮಾಡಿಸಲಾಯಿತು.**

ಸ್ಟ್ಯಾಂಪ ಶುಲ್ಕ ಪಾವತಿಸಿದ ನಂತರ ದಾಖಲೆ ಗುರುತಿಸಲು ಅವಕಾಶ ನೀಡಲಾಯಿತು.

ಮುಂದುವರೆದ **ಮುಖ್ಯ ವಿಚಾರಣೆಃ** ಶ್ರೀ ಬಿ ಎಸ್ ಪಿ **ವಕೀಲರಿಂದಃ**

ಖರೀದಿ ಕರಾರು ಪತ್ರವನ್ನು ನಿಪಿ-1, ನಿಪಿ-1 ನ್ನು ಪ್ರತಿವಾದಿಯರು ಬರೆದುಕೊಟ್ಟಿದ್ದು ಅದಕ್ಕೆ ಸಹಿ ಮಾಡಿರುತ್ತಾರೆ, ನಿಪಿ-1 ಕ್ಕೆ ನಾನು ಸಹ ಸಹಿ ಮಾಡಿರುತ್ತೇನೆ. ನಿಪಿ-1 ರಲ್ಲಿರುವ ತನ್ನ ಸಹಿ ನೋಡಿ ಸಾಕ್ಷಿ ಗುರುತಿಸಿದ್ದು ಅದನ್ನು ನಿಪಿ-1(ಎ) ಎಂದು ಗುರುತಿಸಲಾಯಿತು. ನಿಪಿ-1 ಕ್ಕೆ 2 ಜನ ಸಾಕ್ಷಿದಾರರು ಸಹಿ ಮಾಡಿರುತ್ತಾರೆ. ದಾವಾ ಆಸ್ತಿಯ ಪಹಣಿ ಪತ್ರಿಕೆಗಳನ್ನು ಹಾಜರ

ಪಡಿಸಿದ್ದು ಅವುಗಳನ್ನು ನಿಪಿ-2 ಮತ್ತು 3, ನಮ್ಮ ವಕೀಲರ ಮೂಲಕ ಪ್ರತಿವಾದಿಯರಿಗೆ ನೀಡಿದ ನೋಟೀಸಿನ ಕಚೇರಿ ಪ್ರತಿಯನ್ನು ನಿಪಿ-4, ಅಂಚೆ ರಶೀದಿಗಳನ್ನು ನಿಪಿ-5 ರಿಂದ 8, ಅಂಚೆ ಸ್ವೀಕೃತಿ ಪತ್ರಗಳನ್ನು ನಿಪಿ-9 ರಿಂದ 11, ನೋಟೀಸ ಜಾರಿ ಆದ ಬಗ್ಗೆ ಅಂಚೆ ಇಲಾಖೆಯ ಆನ್ ಲೈನ ದಾಖಲೆಯನ್ನು ಹಾಜರ ಪಡಿಸಿದ್ದು ಅದನ್ನು ನಿಪಿ-12 ಎಂದು ಗುರುತಿಸಲಾಯಿತು.

(ಮುಂದುವರೆದ ಮುಖ್ಯ ವಿಚಾರಣೆಗೆ ಕಾಲಾವಕಾಶ ಕೋರುತ್ತಿದ್ದು, ಕಾಲಾವಕಾಶ ನೀಡಲಾಯಿತು)

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)**

ಓ ಹೇ ಕೆ ಸರಿ ಇದೆ.

ಹಿರಿಯ ದಿವಾಣಿ ನ್ಯಾಯಾಧೀಶರು,
ಕಲಘಟಗಿ.